**Spl.C.(Corruption)/5002/2015**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿ ಡಬ್ಲೂ:** 15

**ಪಿ ಡಬ್ಲೂ:** 11

ಸಾಕ್ಷಿಯ ಹೆಸರು - ಸಣ್ಣ ಈರಣ್ಣಾ
ತಂದೆಯ ಹೆಸರು - ನರಸಿಂಗಪ್ಪ
ವಯಸ್ಸು - 53 ವರ್ಷ
ಉದ್ಯೋಗ - ಹೋಮ್ ಗಾರ್ಡ
ವಾಸಸ್ಥಳ - ಅಮರಾವತಿ, ಹೊಸಪೇಟೆ

**ಸಾಕ್ಷಿಯನ್ನು ದಿನಾಂಕ:** 28-03-2026 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ವಿಶೇಷ ಪಿ. ಪಿ. ಅವರಿಂದ**

ದಿ: **23-07-2014** ರಂದು ನಾನು ಕಲ್ಲಹಳ್ಳಿಯ ಚೆಕ್ ಪೋಸ್ಟ ನಲ್ಲಿ ಹೋಮ್ ಗಾರ್ಡ ಆಗಿ ಕೆಲಸ ಮಾಡುತ್ತಿದ್ದೆ. ಆರೋಪಿ ಕೂಡಾ ಅರಣ್ಯ ಇಲಾಖೆಯ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದ. ಮಧ್ಯಾಹ್ನ **03.00** ಗಂಟೆ ಸುಮಾರಿಗೆ ಚಾಸಾ **-14** ರವರು ಒಂದು ಮೊಬೈಲ್ ನ್ನು ನನಗೆ ನೀಡಿ ಆರೋಪಿ ಅದನ್ನು ನನಗೆ ನೀಡುವಂತೆ ಪೋನ್ ಮಾಡಿ ತಿಳಿಸಿದ್ದಾರೆ ಎಂದು ಹೇಳಿದ. ನಾನು ಸದರಿ ಮೊಬೈಲ್ ನ್ನು ತೆಗೆದುಕೊಂಡೆ. ಅದನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ಮು ಮಾ **2** ಎಂದು ಗುರುತಿಸಲಾಗಿದೆ. ನಂತರ ಆರೋಪಿ ರೂ. **600/-** ಲಂಚಕ್ಕೆ ಬೇಡಿಕೆ ಇಟ್ಟು, ಅದಕ್ಕೆ ಮು ಮಾ **2** ನ್ನು ಅಡಮಾನವಾಗಿ ಇಟ್ಟುಕೊಂಡಿದ್ದು, ಲೋಕಾಯುಕ್ತ ಪೋಲಿಸರು ಆತನನ್ನು ಟ್ರಾಪ್ ಮಾಡಿದ ಮಾಹಿತಿ ತಿಳಿಯಿತು. ಆ ದಿನ ಚಾಸಾ **-13, 16, 20** ರವರು ಕೂಡಾ ನನ್ನೊಂದಿಗೆ ಕರ್ತವ್ಯದಲ್ಲಿ ಇದ್ದರು. ಸಾಕ್ಷಿ ಆರೋಪಿಯನ್ನು ಗುರುತಿಸಿದ್ದಾರೆ. ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಯು ಬಿ ಆರ್., ವಕೀಲರಿಂದ: ಇಲ್ಲಾ.**

ನಾನು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಕೆಲಸ ಮಾಡುತ್ತೇನೆ ಅಂದರೆ ಸರಿ. ಆರೋಪಿ ಅರಣ್ಯ ಇಲಾಖಾ ನೌಕರ. ನನ್ನ ಹಾಗೂ ಆರೋಪಿಯ ಕರ್ತವ್ಯ ಗಳಿಗೆ ಸಂಬಂಧವಿಲ್ಲ ಅಂದರೆ ಸರಿ. ನಾನು ದಿನಗೂಲಿ ನೌಕರ. ನಾನು ಹೇಳಿದಂತೆ ಚಾಸಾ -14 ರವರು ನನಗೆ ಯಾವುದೇ ಮೊಬೈಲ್ ಕೊಟ್ಟಿರಲಿಲ್ಲ ಅಂದರೆ ಸರಿಯಲ್ಲ.

ನನಗೆ ಮೊಬೈಲ್ ನ್ನು ಖಚಿತವಾಗಿ ಗುರುತಿಸಲು ಆಗುವುದಿಲ್ಲ ಅಂದರೆ ಸರಿ. ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ವಿಜಯನಗರ ಜಿಲ್ಲೆ, ಹೊಸಪೇಟೆ.